**ಪಿಡಬ್ಲ್ಯೂ-1**

**ದಿನಾಂಕಃ 25-03-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-**

ಸರ್ವೆ ನಂಬರ್ 20/1 ರ ಆಸ್ತಿಯನ್ನು ನೋಡಿರುತ್ತೇನೆ. ನಿಪಿ-33 ರಲ್ಲಿರುವ ಗಂಗಾಧರಪ್ಪ ನಮಗೆ ಅಣ್ಣತಮ್ಮಂದಿರಾಗಬೇಕು. ಸದರಿ ಆಸ್ತಿಯನ್ನು ನನ್ನ ಅಣ್ಣ ಗಂಗಾಧರಪ್ಪನಿಗೆ ಕೊಟ್ಟು ಅವರ ಆಸ್ತಿಯನ್ನು ನನ್ನ ಅಣ್ಣನ ಹೆಂಡತಿ ಮಂಜುಳಾರವರಿಗೆ ಮಾಡಿರುತ್ತಾರೆ. ಮಂಜುಳಾ ಮತ್ತು ಗಂಗಾಧರಪ್ಪನವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಆಸ್ತಿ ಮಂಜುಳಾ ಹೆಸರಿಗೆ ಕ್ರಯಪತ್ರ ಆಗಿದೆ ಎಂದರೆ ಸರಿ ಆದರೆ ನಮ್ಮ ತಂದೆಯ ಆಸ್ತಿಯನ್ನು ಗಂಗಾಧರಪ್ಪನವರಿಗೆ ಕೊಟ್ಟಿರುತ್ತಾರೆ. ಸದರಿ ವಿಷಯವನ್ನು ನನ್ನ ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.20/1 ಮಂಜುಳಾ ರವರ ಸ್ವಂತ ಆಸ್ತಿಯಾಗಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಐಟಂ ನಂ.8 ನ್ನು ನಾನು ನೋಡಿರುತ್ತೇನೆ. ಮೊದಲು ಸದರಿ ಆಸ್ತಿ ನನ್ನ ತಮ್ಮ ಕಲ್ಲೇಗೌಡನ ಹೆಸರಿನಲ್ಲಿತ್ತು ಆ ನಂತರ ನನ್ನ ಅಣ್ಣ ಚಂದ್ರಶೇಖರಪ್ಪ ಮಲ್ಲಿಕಯ್ಯ ಮತ್ತು ಗೌರಮ್ಮ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಲ್ಲಿಕಯ್ಯ ಮತ್ತು ಗೌರಮ್ಮ ನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಮ್ಮ ಕಲ್ಲೇಗೌಡನಿಗೆ ಕಣ್ಣು ಕಾಣುತ್ತಿರಲಿಲ್ಲ. ಆತನಿಗೆ ಮದುವೆಯಾಗಿರಲಿಲ್ಲ. ಕಲ್ಲೇಗೌಡನೇ ಐಟಂ. ನಂ.8 ನ್ನು ಮಾರಾಟ ಮಾಡಿರುತ್ತಾನೆಂದರೆ ಸರಿಯಲ್ಲ ನನ್ನ ಅಣ್ಣ ಚಂದ್ರಶೇಖರಪ್ಪ ಮಾರಾಟ ಮಾಡಿರುತ್ತಾರೆ. ದಾವಾ ಹಾಕುವ ಸಮಯದಲ್ಲಿ ಸದರಿ ಆಸ್ತಿ ಗೌರಮ್ಮನವರ ಹೆಸರಿಗೆ ಆಗಿತ್ತು ಎಂದರೆ ಸರಿ. ಹೀಗಾಗಿ ಐಟಂ ನಂ.7 ಮತ್ತು 8 ರಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಚಂದ್ರಶೇಖರಪ್ಪ ನನಗೆ ಆರ್ಥಿಕವಾಗಿ ಸಾಕಷ್ಟು ಸಹಾಯ ಮಾಡಿರುತ್ತಾರೆಂದರೆ ಸರಿಯಲ್ಲ. ಬೊಮ್ಮೇನಹಳ್ಳಿ ಸೇವಾ ಸಹಕಾರ ಸಂಘದಲ್ಲಿ ನನ್ನ ಅಣ್ಣ ಚಂದ್ರಶೇಖರಪ್ಪ ಕುಟುಂಬದ ಅವಶ್ಯಕತೆಗಾಗಿ ಸಾಲ ಮಾಡಿರುತ್ತಾರೆಂದರೆ ಸರಿಯಲ್ಲ. ಐಟಂ ನಂ.7 ಮತ್ತು 8 ನಮ್ಮ ಕುಟುಂಬಕ್ಕೆ ಸಂಬಂಧಿಸಿದವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ರವರು

ದಾವಾಸ್ತಿಗಳಲ್ಲಿ ತಮ್ಮ ಹಿಸ್ಸೆಯನ್ನು ನನ್ನ ಅಣ್ಣ ಚಂದ್ರಶೇಖರಪ್ಪನವರಿಗೆ ಕೊಡಬೇಕೆಂದು ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ನನ್ನ ತಮ್ಮ ಮೃತಪಟ್ಟು 3 ವರ್ಷಗಳು ಆದವು. ಈಗಾಗಲೇ ನನ್ನ ಅಣ್ಣ ನನಗೆ ಸಾಕಷ್ಟು ಹಣಕಾಸಿನ ನೆರವು ನೀಡಿದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **25-03-2026.**